ಈ) ಕೆಪಾಸಿಟರುಗಳನು ಅಳವಡಿಸುವುದು.

೧) ೧೧ ಕೆ.ವಿ. ಮಾರ್ಗಗಳಲ್ಲಿ ಮತ್ತು ೧೧೦ ಕೆ.ವಿ. ೬೮ ಕೆ.ವಿ. ಕೇಂದ್ರಗಳಲ್ಲಿ.

೨) ಮುಂಡಳಿಯಲ್ಲಿನ ಜಾಗೃತ ದಳವನ್ನು (ಎಲ್ಲಿ ಅವಶ್ಯಕವೋ ಅಲ್ಲಿ) ಸಮರ್ಥಗೊಳಿಸುವುದು. ಹೈಟೆನ್‌ಷನ್ ಮತ್ತು ಇತರ ಸ್ಥಾವರಗಳಲ್ಲಿ ಇರುವ ತಪ್ಪು ಕಳ್ಳತನ ಅಥವಾ ದುರುಪಯೋಗಗಳನ್ನು ಕಂಡುಹಿಡಿಯಲು ಅನಿರೀಕ್ಷಿತ ತನಿಖೆ ಮಾಡುವುದು.

## ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಸಚಿವರುಗಳಾದ ಶ್ರೀ ಜಿ. ಬಸವಣ್ಣೆಪ್ಪ, ಶ್ರೀ ಎಂ.ಪಿ. ಪ್ರಕಾಶ್, ಡಾ: ಜೀವರಾಜ್ ಆಳ್ವ ಮತ್ತು ಶ್ರೀ ಪಿ.ಜಿ.ಆರ್. ಸಿಂಧ್ಯ ಅವರುಗಳ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧) ಅ) ಕರ್ನಾಟಕ ಅಲ್ಪ ಸಂಖ್ಯಾತರ ನಿಗಮದ ೧೯೮೬-೮೭ನೇ ಸಾಲಿನ ಮೊದಲನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು.

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ೧೯೮೬-೮೭ನೇ ಸಾಲಿನ ಹತ್ತನೆಯ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು

೨) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ಪ್ರಾಗೂ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ೧೯೮೫-೮೬ನೇ ಸಾಲಿನ ೧೬ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೩) ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫ (೨) ಕಲಮಿನ ಮೇರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

೪) ೧೯೫೦ನೇ ಇಸವಿಯ ರಸ್ತೆ ಸಾರಿಗೆ ನಿಗಮ ಶಾಸನದ ೩೫ (೩)ನೇ ಕಲಮಿನ ಮೇರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೮೬-೮೭ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

## ಅರ್ಜಿಯನ್ನು ಒಪ್ಪಿಸುವುದು

ಶ್ರೀ ವಂಟ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಅಥಣಿ ತಾಲ್ಲೂಕಿನ ಮಂಹಿಷಿವಾಡಗಿ ಗ್ರಾಮ ಸೇವಾ ಸಹಕಾರೀ ಸಂಘದ ನ್ಯಾಯ ಬೆಲೆಯ ಅಂಗಡಿಯನ್ನು ರದ್ದುಪಡಿಸಿ ಶ್ರೀ ಮಹಾವೀರ ಹಾಲಿನ ಉತ್ಪಾದಕ ಸಹಕಾರೀ ಸಂಘಕ್ಕೆ ಕಾನೂನನ್ನು ಉಲ್ಲಂಘನೆ ಮಾಡಿ ಧಾನ್ಯ ವಿತರಣೆಯ ವ್ಯವಸ್ಥೆಯನ್ನು ಮಂಜೂರು ಮಾಡಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

## ಗಮನ ಸೆಳೆಯುವ ಸೂಚನೆ

**Hardship caused to the poor farmers of yadgir Taluk Gulbarga District due to collection of land revenue.**

SRI M. MALLIKAPJUNA M. KHARGE.—Mr. Speaker, I call the attention of the Minister for Revenue, planning and Irrigation to